ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ : ಚಿಕ್ಕಮಗಳೂರು ವಿಭಾಗ : ಚಿಕ್ಕಮಗಳೂರು

ಸಂ/ಕರಾಸಾ/ಚಿವಿ/ಸಂಚಾರ/ವಾಣಿಜ್ಯ/ 1607/2018-19 ದಿನಾಂಕ:07.08.2018

## "ಸಂಧಾನ ಪ್ರಕಟಣೆ ಸಂಖ್ಯೆ : 02/2018"

ಕ.ರಾ.ರ.ಸಾ.ನಿಗಮ, ಚಿಕ್ಕಮಗಳೂರು ವಿಭಾಗದ ವ್ಯಾಪ್ತಿಯ ಈ ಕೆಳಕಂಡ ಬಸ್ ನಿಲ್ದಾಣಗಳಲ್ಲಿ ಖಾಲಿಯಿರುವ ವಾಣಿಜ್ಯ ಮಳಿಗೆಗಳ ಶಾಶ್ವತ ಹಾಗೂ ತೆರೆದ ಸ್ಥಳಗಳಿಗೆ ಪರವಾನಗಿದಾರರನ್ನು ಆಯ್ಕೆ ಮಾಡಲು ಆಸಕ್ತರನ್ನು **ದಿನಾಂಕ:30.08.2018 ರಂದು ಸಮಯ** 15.00 ಗಂಟೆಗೆ ಮಾತುಕತೆಯ ಮೂಲಕ ನೀಡಲು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಭಾಗವಹಿಸಲು ಆಹ್ವಾನಿಸಲಾಗಿದೆ. ಪರವಾನಗಿ ಶುಲ್ಕದ ಮೇಲೆ ಶೇಖಡ 10% ರಷ್ಟು ಪ್ರತಿ ವರ್ಷ ಹೆಚ್ಚಿಸಲಾಗುವುದು. ಅವಧಿ ಮುಗಿದ ಬಳಿಕ ಹೊಸದಾಗಿ ಇ-ಟೆಂಡರ್ ಕರೆಯಲಾಗುವುದು. ಸಂಧಾನ ಮಾತುಕತೆಯಲ್ಲಿ ಆಯ್ಕೆಯಾದ ಆಸಕ್ತರು ಕರ್ನಾಟಕ ಸ್ಟಾಂಪ್ ಕಾಯ್ದೆಯನ್ವಯ ಸ್ಟಾಂಪ್ ಶುಲ್ಕವನ್ನು ಭರಿಸಿ ಸಂಸ್ಥೆಯೊಂದಿಗೆ ಕರಾರು ಒಪ್ಪಂದ ಮಾಡಿಕೊಳ್ಳುವುದು.

| ಕ್ರ. ಸಂ | ನಿಲ್ದಾಣದ ಹೆಸರು | ವಾಣಿಜ್ಯ ಮಳಿಗೆ/ ತೆರೆದ ಜಾಗದ ವಿವರ ಹಾಗೂ ತೆರೆವುಗೊಳ್ಳುವ ದಿನಾಂಕ | ಪರವಾನಿಗೆ ಅವಧಿ | ನಿಗದಿ ಪಡಿಸಿದ ಮಾಸಿಕ ಪರವಾನಿಗೆ ಶುಲ್ಕ (ರೂ.ಗಳಲ್ಲಿ) | ಇ.ಎಂ.ಡಿ (ರೂ.ಗಳಲ್ಲಿ) | ವಿಸ್ತೀರ್ಣ ಚ.ಅಡಿ ಗಳಲ್ಲಿ | ಅರ್ಜಿ ಶುಲ್ಕ GST ಒಳಗೊಂಡಂತೆ | ಖಾಲಿಯಾಗುವ ದಿನಾಂಕ |
|---|---|---|---|---|---|---|---|---|
| 1 | ಅರಸೀಕೆರೆ | ಜನರಲ್ ಸ್ಟಾಲ್-2 (ತೆರೆದ ಜಾಗ) | 3ವರ್ಷ | 11,598/- | 34,794/- | 100.00 | 137/- | ಖಾಲಿಯಿದೆ |
| 2 | ಅರಸೀಕೆರೆ | ಜನರಲ್ ಸ್ಟಾಲ್-4 (ತೆರೆದ ಜಾಗ) | 3ವರ್ಷ | 12,137/- | 36,411/- | 100.00 | 143/- | ಖಾಲಿಯಿದೆ |
| 3 | ತರೀಕೆರೆ | ದ್ವಿಚಕ್ರ ವಾಹನ ನಿಲುಗಡೆ (ತೆರೆದ ಜಾಗ) | 3ವರ್ಷ | 9,540/- | 28,620/- | 100.00 | 118/- | ಖಾಲಿಯಿದೆ |

ಸದರಿ ಮಳಿಗೆಯನ್ನು ನಡೆಸಲು ಆಸಕ್ತರು, ನಿಗದಿಪಡಿಸಿದ ಅರ್ಜಿ ಶುಲ್ಕದ ಮೊತ್ತಕ್ಕೆ ಡಿ.ಡಿ ಯನ್ನು ಮತ್ತು ಇ.ಎಂ.ಡಿ ಮೊತ್ತಕ್ಕೆ ಡಿ.ಡಿ ಯನ್ನು ಪ್ರತ್ಯೇಕವಾಗಿ 'Divisional Controller K.S.R.T.C Chikmagaluru' ಇವರ ಹೆಸರಿಗೆ ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದು, ಸದರಿ ಡಿ.ಡಿ ಯೊಂದಿಗೆ ತಮ್ಮ ಗುರುತಿನ ಚೀಟಿ (ವೋಟರ್ ಐ.ಡಿ/ಆಧಾರ್ ಕಾರ್ಡ್/ಪಡಿತರ ಚೀಟಿ/ಪಾನ್ ಕಾರ್ಡ್ ಹಾಗೂ ಇನ್ನಿತರ) ಮತ್ತು ಮನವಿ ಪತ್ರದೊಂದಿಗೆ ವಿಭಾಗೀಯ ನಿಯಂತ್ರಣಾಧಿಕಾರಿ, ಕ.ರಾ.ರ.ಸಾ.ನಿಗಮ, ಚಿಕ್ಕಮಗಳೂರು ಇವರಲ್ಲಿ **ದಿನಾಂಕ** : 30.08.2018 ರಂದು ಸಮಯ 15.00 ಗಂಟೆಗೆ ನಡೆಯಲಿರುವ ಸಂಧಾನದಲ್ಲಿ ಭಾಗವಹಿಸಿ ಸಂಸ್ಥೆಯ ನಿಯಮಗಳನ್ನು ಪಾಲಿಸಿ ಪರವಾನಗಿದಾರರಾಗಿ ಆಯ್ಕೆಯಾಗಬಹುದಾಗಿರುತ್ತದೆ. ಸಂಸ್ಥೆಯ ನಿಯಮಾವಳಿಗಳ ಬಗ್ಗೆ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಯ ಕಛೇರಿಯಿಂದ ಪಡೆದು ಸಂಧಾನದಲ್ಲಿ ಭಾಗವಹಿಸಬಹುದಾಗಿರುತ್ತದೆ.

ಸದರಿ ಮಳಿಗೆಗಳಿಗೆ ಆಸಕ್ತರು ಮಾತುಕತೆಗೆ ಕರೆದಿರುವ ಪ್ರಕಟಣೆಯನ್ನು ಯಾವುದೇ ಕಾರಣ ನೀಡದೇ ಪುರಸ್ಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ. ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ಚಿಕ್ಕಮಗಳೂರು ವಿಭಾಗ-577 101 ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

-: ಸಂಪರ್ಕಿಸುವ ದೂರವಾಣಿ ಸಂಖ್ಯೆ :-

ವಿಭಾಗೀಯ ಸಂಚಾರ ಅಧಿಕಾರಿ – 7760990402

ಸಹಾಯಕ ಸಂಚಾರ ವ್ಯವಸ್ಥಾಪಕರು – 7760990411

ಸಹಿ

ವಿಭಾಗೀಯ ನಿಯಂತ್ರಣಾಧಿಕಾರಿ

ಕ.ರಾ.ರ.ಸಾ.ನಿಗಮ::ಚಿಕ್ಕಮಗಳೂರು ವಿಭಾಗ.

**ಪ್ರತಿಯನ್ನು ವಂದನೆಗಳೊಂದಿಗೆ** :-

1. ಮುಖ್ಯ ಸಂಚಾರ ವ್ಯವಸ್ಥಾಪಕರು (ವಾಣಿಜ್ಯ), ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
2. ವ್ಯವಸ್ಥಾಪಕ ನಿರ್ದೇಶಕರು, ವಾ.ಕ.ರ.ಸಾ.ಸಂಸ್ಥೆ, ಈ.ಕ.ರ.ಸಾ.ಸಂಸ್ಥೆ ಮತ್ತು ಬೆ.ಮ.ಸಾ.ಸಂಸ್ಥೆ ಕೇಂದ್ರ ಕಛೇರಿ, ಹುಬ್ಬಳ್ಳಿ, ಕಲಬುರಗಿ ಮತ್ತು ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
3. ಎಲ್ಲಾ ಹಿರಿಯ/ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕ.ರಾ.ರ.ಸಾ.ನಿಗಮ, ವಾ.ಕ.ರ.ಸಾ.ಸಂಸ್ಥೆ, ಈ.ಕ.ರ.ಸಾ.ಸಂಸ್ಥೆ ಮತ್ತು ಬೆ.ಮ.ಸಾ.ಸಂಸ್ಥೆ ರವರ ಮಾಹಿತಿಗಾಗಿ ಹೆಚ್ಚಿನ ಪ್ರತಿಗಳನ್ನು ಸಾರ್ವಜನಿಕರ ಅವಗಹಾನೆಗಾಗಿ ಮುಖ್ಯ ಬಸ್ ನಿಲ್ದಾಣದ ಸೂಚನಾ ಫಲಕದಲ್ಲಿ ಅಂಟಿಸಲು ಕೋರಿದೆ.
4. ವಿಭಾಗೀಯ ಸಂಚಾರ ಅಧಿಕಾರಿ, ಸಹಾಯಕ ಕಾರ್ಯನಿರ್ವಾಹಕ ಅಧಿಕಾರಿ, ಸಹಾಯಕ ಕಾನೂನು ಅಧಿಕಾರಿ, ಭದ್ರತಾ ಮತ್ತು ಜಾಗೃತಾಧಿಕಾರಿ ಮತ್ತು ಸಹಾಯಕ ಲೆಕ್ಕಾಧಿಕಾರಿ, ಕ.ರಾ.ರ.ಸಾ.ನಿಗಮ ಚಿಕ್ಕಮಗಳೂರು ವಿಭಾಗ ರವರ ಮಾಹಿತಿಗಾಗಿ ದಿನಾಂಕ : 30.08.2018 ರಂದು 15.00 ಗಂಟೆಗೆ ಸಂಧಾನ ಸಭೆಗೆ ಹಾಜರಾಗುವುದು.
5. ಸಹಾಯಕ ಆಡಳಿತಾಧಿಕಾರಿ, ಕ.ರಾ.ರ.ಸಾ.ನಿಗಮ, ಚಿಕ್ಕಮಗಳೂರು ವಿಭಾಗ ರವರಿಗೆ ಕಳುಹಿಸುತ್ತ ಸದರಿ ಪ್ರಕಟಣೆಯನ್ನು ವಿಭಾಗೀಯ ಕಛೇರಿ ಸೂಚನಾ ಫಲಕದಲ್ಲಿ ಪ್ರಕಟಿಸಲು ಈ ಮೂಲಕ ತಿಳಿಸಿದೆ.
6. ಘಟಕ ವ್ಯವಸ್ಥಾಪಕರು, ಕ.ರಾ.ರ.ಸಾ.ನಿಗಮ, ಚಿಕ್ಕಮಗಳೂರು / ಮೂಡಿಗೆರೆ / ಕಡೂರು / ಅರಸೀಕೆರೆ / ಸಕಲೇಶಪುರ / ಮತ್ತು ಬೇಲೂರು ಘಟಕ ರವರ ಮಾಹಿತಿಗಾಗಿ ಕಳುಹಿಸುತ್ತಾ ತಮ್ಮ ವ್ಯಾಪ್ತಿಗೆ ಬರುವ ಎಲ್ಲಾ ಬಸ್ ನಿಲ್ದಾಣಗಳಲ್ಲಿ ಸದರಿ ಪ್ರಕಟಣೆಯನ್ನು ನಿಲ್ದಾಣದ ಸೂಚನಾ ಫಲಕದಲ್ಲಿ ಪ್ರಕಟಿಸಿ ಸಾರ್ವಜನಿಕ ಗಮನಕ್ಕೆ ತರುವುದು ಹಾಗೂ ಹೆಚ್ಚಿನ ಪ್ರಚಾರ ಮಾಡುವುದು.